**ದಿಃ 17.11.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

(ಸಾಕ್ಷಿಗೆ ಕನ್ನಡ ಭಾಷೆ ಬರುವುದಿಲ್ಲ ಎಂದು ವಕೀಲರು ಹೇಳಿದ ಕಾರಣ ಮರಾಠಿ/ಹಿಂದಿ ಭಾಷೆ ಮತ್ತು ಕನ್ನಡ ಭಾಷೆ ತಿಳಿದಿದೆ ಎಂದು ಹೇಳಿರುವ ವಕೀಲರಾದ R.S.B ರವರನ್ನು ತರ್ಜುಮೆದಾರರಾಗಿ ನೇಮಕ ಮಾಡಿದ್ದು ಸದರಿಯವರು ಪ್ರತಿವಾದಿಯರ ಪರ ವಕೀಲರು ಕನ್ನಡದಲ್ಲಿ ಕೇಳಿದ ಪ್ರಶ್ನೆಗಳನ್ನು ಮರಾಠಿ/ಹಿಂದಿಗೆ ತರ್ಜುಮೆ ಮಾಡಿ ಸಾಕ್ಷಿಗೆ ಹೇಳಲು, ಸಾಕ್ಷಿಯು ಮರಾಠಿ/ಹಿಂದಿಯಲ್ಲಿ ಹೇಳಿದ ಉತ್ತರವನ್ನು ಕನ್ನಡಕ್ಕೆ ತರ್ಜುಮೆ ಮಾಡಿ ಹೇಳಲು ಒಪ್ಪಿಕೊಂಡಿರುತ್ತಾರೆ. ರೂ.300/- ನ್ನು ತರ್ಜುಮೆದಾರರ ಫೀ ಎಂದು ನಿಗದಿಪಡಿಸಿದ್ದು ವಾದಿಯು ಸದರಿ ಫೀಯನ್ನು ನೀಡಲು ಆದೇಶಿಸಲಾಗಿದೆ.)

**ಮುಂದುವರಿದ ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ S.I.G. ವಕೀಲರಿಂದ**

ದಾವಾ ಆಸ್ತಿ ಎತ್ತರ NH ರಸ್ತೆಗೆ ಹೋಲಿಸಿದರೆ ಕೆಳಗೆ ಇದೆ ಎಂದರೆ ಸರಿ. ಅಂದಾಜು 3 ರಿಂದ 4 ಅಡಿ ಕೆಳಗೆ ಇರಬಹುದು. ನಾನು ಹಳೆಯ ಕಟ್ಟಡವನ್ನು ಕೆಡವಿ ಹೊಸ ಕಟ್ಟಡವನ್ನು ಕಟ್ಟಲು ಮಹಾನಗರ ಪಾಲಿಕೆಯಿಂದ ಪರವಾನಿಗೆ ಪಡೆದುಕೊಂಡಿಲ್ಲ. ನಮ್ಮ ದಾವಾ ಆಸ್ತಿ ಕೆಳಗೆ ಇರುವುದರಿಂದ ಪ್ರತಿವಾದಿಯ ಕಂಪೌಂಡ ಬಳಿ ನೀರು ನಿಂತು ಕೆಟ್ಟ ವಾಸನೆ ಬರುತ್ತಿದೆ ಎಂದರೆ ಸರಿ. ಆ ರೀತಿ ನೀರು ನಿಲ್ಲುತ್ತಿದ್ದ ಕಾರಣ ಮತ್ತು ಸೊಳ್ಳೆಗಳು ಹೆಚ್ಚಾದ ಕಾರಣ ಪ್ರತಿವಾದಿ ಸರಿಯಾದ ವ್ಯವಸ್ಥೆ ಮಾಡುವಂತೆ ವಿನಂತಿಸಿಕೊಂಡಿದ್ದರು ಎಂದರೆ ಸರಿಯಲ್ಲ. ಸಂಜೀವ ಪೂಜಾರಿಯ ಮನೆಯ ದಕ್ಷಿಣ ಮತ್ತು ಉತ್ತರಕ್ಕೆ ಎರಡು ಬಾಗಿಲುಗಳು ಇವೆ ಎಂದರೆ ಸಾಕ್ಷಿ ದಕ್ಷಿಣಕ್ಕೆ ಮಾತ್ರ ಇದೆ ಎಂದು ನುಡಿಯುತ್ತಾರೆ. ಈಗ ನೋಡುತ್ತಿರುವ ಪೋಟೊದಲ್ಲಿ ಪ್ರತಿವಾದಿಯ ಮನೆಯ ಉತ್ತರದ ಬಾಗಿಲು ಕಾಣುತ್ತಿದೆ ಎಂದರೆ ಸರಿ. ಸಾಕ್ಷಿ ಸದರಿ ಪೋಟೊವನ್ನು ಒಪ್ಪಿಕೊಂಡ ಮೇರೆಗೆ ಅದನ್ನು ನಿಡಿ 1 ಎಂದು ಗುರುತಿಸಲಾಯಿತು. ಸದರಿ ಉತ್ತರದ ಬಾಗಿಲಿನಲ್ಲಿ ಪ್ರತಿವಾದಿ ಮತ್ತು ಅವರ ತಾಯಿ ಓಡಾಡುವುದು ಮಾಡುತ್ತಾರೆ ಎಂದರೆ ಸರಿಯಲ್ಲ. ನಿಡಿ 1 ರ ಖಾಲಿ ಜಾಗದಲ್ಲಿ ದೊಡ್ಡ ಗುಂಡಿ ಬಿದ್ದಿರುವುದು ಕಾಣುತ್ತದೆ ಎಂದರೆ ಸರಿ. ಸದರಿ ಗುಂಡಿಗೆ ಹೊಂದಿಕೊಂಡಂತೆ ಪ್ರತಿವಾದಿಯ

ಮನೆಯ ಕಂಪೌಂಡ ಇದೆ ಎಂದರೆ ಸರಿಯಲ್ಲ. ಸದರಿ ಕಂಪೌಂಡನ್ನು 2023 ಕ್ಕೂ ಪೂರ್ವದಲ್ಲಿ ಸುಮಾರು 3-4 ವರ್ಷಗಳ ಹಿಂದೆ ಕಟ್ಟಿದ್ದಾರೆ ಎಂದರೆ ಸರಿ. ಸದರಿ ಸಮಯದಲ್ಲಿ ಉತ್ತರ ಮತ್ತು ದಕ್ಷಿಣದ ಬಾಗಿಲು ಇಟ್ಟಿದ್ದಾರೆ ಎಂದರೆ ಸರಿಯಲ್ಲ. ಸದರಿ ಕಂಪೌಂಡ ಕಟ್ಟುವ ಸಮಯದಲ್ಲಿ ನನ್ನ ಮತ್ತು ಪ್ರತಿವಾದಿಯ ನಡುವೆ ಜಗಳ ಆಗಿತ್ತು ಎಂದರೆ ಸರಿಯಲ್ಲ. ಆ ರೀತಿ ಜಗಳ ಆದ ಬಗ್ಗೆ ನ್ಯಾಯಾಲಯಕ್ಕೆ ದಾಖಲೆ ಹಾಜರು ಮಾಡಿಲ್ಲ. ನಾನು ಆ ರೀತಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ 03.11.2023 ರಂದು ಪ್ರತಿವಾದಿ ಬಾಗಿಲು ಮತ್ತು ಕಿಟಗಿ ಇಟ್ಟಿದ್ದಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ ಸೆಟ್ ಬ್ಯಾಕ ಬಿಟ್ಟು ತನ್ನ ಕಟ್ಟಡ ಕಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಗುರಾಡಿಯ ಸ್ವೀಟ ಮಾರ್ಟ ನ ಮೊದಲ ಮಹಡಿಯಲ್ಲಿ ವಾಸ ಮಾಡುತ್ತಿದ್ದೆ ಎಂದರೆ ಸರಿ. ಪ್ರತಿವಾದಿ ಕಟ್ಟಡ ಕಟ್ಟುತ್ತಾ ಇದ್ದುದು ಸರಿ ಇದ್ದರಿಂದ ನಾನು ಅಲ್ಲಿ ವಾಸ ಮಾಡುತ್ತಿದ್ದರೂ ಕೂಡ ತಕರಾರು ಮಾಡಲಿಲ್ಲ ಎಂದರೆ ಸಾಕ್ಷಿ ತಕರಾರು ಮಾಡಿದ್ದೇನೆ ಎಂದು ನುಡಿಯುತ್ತಾರೆ. ನಾನು ಆಗ ಪೋಲಿಸರಿಗೆ ದೂರು ಕೊಟ್ಟಿದ್ದೆ. ಬೇರೆ ಯಾವುದೇ ಅಧಿಕಾರಿಗಳಿಗೆ ದೂರು ಕೊಟ್ಟಿಲ್ಲ. ನಾನು ದೂರು ಕೊಟ್ಟಿರುವುದಕ್ಕೆ ದಾಖಲೆ ಹಾಜರು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ ಚಾಲಕ ವೃತ್ತಿ ಮಾಡುವುದರಿಂದ ಯಾರು ಜೊತೆಗೂ ತಕರಾರು ಮಾಡದೇ ತನ್ನ ಪಾಡಿಗೆ ತಾವು ಇರುತ್ತಾರೆ ಎಂದರೆ ಸರಿಯಲ್ಲ. ನಾನು ದಾವಾ ಆಸ್ತಿಯಲ್ಲಿ ಜೆಸಿಬಿಯಿಂದ ಮಣ್ಣನ್ನು ತೆಗೆಯುತ್ತಿರುವಾಗ ಪ್ರತಿವಾದಿ ಸುಮಾರು 4 ರಿಂದ 5 ಜನರನ್ನು ಕರೆದುಕೊಂಡು ಬಂದು ಜಗಳ ಮಾಡುತ್ತಾನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಉಧ್ಯಮಬಾಗ ಠಾಣೆಯಲ್ಲಿ ದೂರು ಕೊಡುವ ಪೂರ್ವದಲ್ಲಿ ನಾನು ಪ್ರತಿವಾದಿಯೊಂದಿಗೆ ಜಗಳ ತೆಗೆದಿದ್ದೆ ಎಂದರೆ ಸರಿಯಲ್ಲ. ಆ ರೀತಿ ಜಗಳ ಮಾಡಿದ ಕಾರಣ ಪ್ರತಿವಾದಿ ಸದರಿ ಠಾಣೆಗೆ ದೂರು ಕೊಟ್ಟಿದ್ದ ಎಂದರೆ ಸರಿ. ಆದರೆ ಜಗಳ ಮಾಡಿರಲಿಲ್ಲ ಎಂದು ನುಡಿಯುತ್ತಾರೆ. ಆ ರೀತಿ ನಾನು ಪೋಲಿಸರಿಗೆ ದೂರು ಕೊಟ್ಟ ನಂತರ ನಾನು ಪದೇ ಪದೇ ಸದರಿ ಬೀದಿಯಲ್ಲಿ ಜಗಳ ಮಾಡುತ್ತೇನೆ ಎಂದು ಅಕ್ಕಪಕ್ಕದವರು ನನ್ನನ್ನು ಮನೆಯಿಂದ ಖಾಲಿ ಮಾಡಿಸಿದರೂ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಹಿರಿಯರು ದಾವಾ ಸ್ವತ್ತಿನಲ್ಲಿ ಕಟ್ಟಡ ಕಟ್ಟಿದರೆ ಉಪಯೋಗ ಆಗುವುದಿಲ್ಲ ಆದ್ದರಿಂದ ಪ್ರತಿವಾದಿಗೆ ಮಾರಾಟ ಮಾಡಿ ಎಂದು ಹೇಳಿದಾಗ ನಾನು ಪೋಲಿಸರಿಗೆ ಪುನಃ ದೂರು ಕೊಟ್ಟಿದ್ದೇನೆ ಎಂದರೆ ಸರಿ. ಸಾಕ್ಷಿ ಮುಂದುವರಿದು ಪ್ರತಿವಾದಿ ಹೇಳಿದ ಉದ್ದೇಶಕ್ಕಾಗಿ ದೂರು ಕೊಟ್ಟಿಲ್ಲ ಆದರೆ ನನಗೆ ಹೆದರಿಸಿದ ಕಾರಣ ದೂರು ಕೊಟ್ಟಿದ್ದೇನೆ ಎಂದು ನುಡಿಯುತ್ತಾರೆ. ನಂತರ ನಾನು ಹೇಳಿದ ಹಣಕ್ಕೆ ಖರೀದಿ ಮಾಡದ ಕಾರಣ ಈ ಸುಳ್ಳು ಕೇಸು ಹಾಕಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ ತನ್ನ ಉತ್ತರದ ಬಾಗಿಲಿನಲ್ಲಿ ವಹಿವಾಟು ಮಾಡಲು ನಾನು ತೊಂದರೆ ಕೊಟ್ಟ ಕಾರಣ ಪ್ರತಿವಾದಿ ನನ್ನ ಮೇಲೆ ಈ ನ್ಯಾಯಾಲಯದಲ್ಲಿ ಸಿವಿಲ್ ಕೇಸು ಹಾಕಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿ ಹಾಕಿದ ಪ್ರಕರಣದಲ್ಲಿ ಅವರ ಪರವಾಗಿ ಮನಾಯಿ ಆದೇಶ ಸಿಕ್ಕರು ಸಹ ನಾನು ಆದೇಶಕ್ಕೆ ಬೆಲೆ ಕೊಡದೇ ಪುನಃ ಪೋಲಿಸರಿಗೆ ದೂರು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಮನಾಯಿ ಆದೇಶ ಸಿಕ್ಕ ಬಗ್ಗೆ ಪ್ರತಿವಾದಿ ಆದೇಶದ ಪ್ರತಿಯನ್ನು ನನಗೆ ಅಂಚೆ ಮೂಲಕ ಕಳಿಸಿದ್ದರು ಎಂದರೆ ನನಗೆ ಗೊತ್ತಿಲ್ಲ.

ಪ್ರತಿವಾದಿ ತನ್ನ ಜಾಗದಲ್ಲಿ ಮನೆ ಕಟ್ಟಿಕೊಂಡು ಬಳಕೆ ಮಾಡಿಕೊಳ್ಳುತ್ತಿದ್ದಾರೆ ಪ್ರತಿವಾದಿ ಎಂದು ತೊಂದರೆ ಕೊಟ್ಟಿಲ್ಲ ಮತ್ತು ಹೆದರಿಸಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ಪರವಾನಿಗೆ

ಪಡೆದುಕೊಂಡು ಮನೆ ಕಟ್ಟಿಕೊಂಡಿದ್ದಾರೆ, ಕಿಟಗಿ ಬಾಗಿಲುಗಳನ್ನು ಇಟ್ಟುಕೊಂಡಿದ್ದಾರೆ ಎಂದರೆ ಸರಿ. ಸಾಕ್ಷಿ ಮುಂದುವರಿದು ನನ್ನ ಆಸ್ತಿಯಲ್ಲಿ ಕಂಪೌಂಡ ಕಟ್ಟಿದ್ದಾರೆ ಎಂದು ನುಡಿಯುತ್ತಾರೆ. ಪ್ರತಿವಾದಿ ಎಷ್ಟು ಅಡಿ ಒತ್ತುವರಿ ಮಾಡಿದ್ದಾರೆ ಎಂಬ ಬಗ್ಗೆ ದಾಖಲೆ ಹಾಜರು ಮಾಡಿರುವುದಿಲ್ಲ. ಯಾವ ದಿಕ್ಕಿಗೆ ಒತ್ತುವರಿ ಮಾಡಿದ್ದಾರೆ ಎಂಬ ಬಗ್ಗೆ ದಾಖಲೆ ಹಾಜರು ಮಾಡಿಲ್ಲ. ಪ್ರತಿವಾದಿ ನನ್ನ ಜಾಗವನ್ನು ಒತ್ತುವರಿ ಮಾಡಿಲ್ಲ ಎಂದರೆ ಸರಿಯಲ್ಲ.

ದಾವಾ ಆಸ್ತಿ ಇರುವ ಜಾಗ ಹಾಗೂ ಅಕ್ಕಪಕ್ಕದ ಜಾಗಕ್ಕೆ ಸಂಬಂಧಪ್ಪಂತೆ ಕೆಜೆಪಿ ಆಗಿಲ್ಲ ಮತ್ತು ಅನುಮೋದಿತ ಲೇಔಟ ಇರುವುದಿಲ್ಲ ಎಂದರೆ ಸರಿ. ಪ್ರತಿವಾದಿ ಒತ್ತುವರಿ ಮಾಡದೇ ಇರುವುದರಿಂದ ಯಾವುದೇ ದಾಖಲೆ ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಪೋಲಿಸರಿಗೆ ದೂರು ಕೊಟ್ಟರೆ ಮತ್ತು ನ್ಯಾಯಾಲಯದಲ್ಲಿ ಕೇಸು ಹಾಕಿದರೆ ನಾನು ಹೇಳಿದ ಹಣಕ್ಕೆ ಪ್ರತಿವಾದಿ ಖರೀದಿ ಮಾಡುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗೆ ನಾನೇ ಸಾಕಷ್ಟು ಮಾನಸೀಕ ತೊಂದರೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ:** ಇಲ್ಲ

ತೆರೆದ ನ್ಯಾಯಾಲಯದಲ್ಲಿ ಈ ಮೇಲೆ ಸಾಕ್ಷಿ ಸ್ವತಃ ಹೇಳಿದ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ.

Sd/-

1ನೇ ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,
ಬೆಳಗಾವಿ.